ಕಾಲೇಜು ಶಿಕ್ಷಣ ಇಲಾಖೆ

E-MAIL jdmysore@gmail.com & jdir_cce_kamy@yahoo.com
Website www.rjdcemys.in
Phone 0821-2426696
Fax 0821-2428696

ಸಂಖ್ಯೆ:ಪ್ರಾಕಮೈ/ಕಾಶಿಇ/397/ಸುತ್ತೋಲೆ/2015-16

ಪ್ರಾದೇಶಿಕ ಜಂಟಿನಿರ್ದೇಶಕರ ಕಛೇರಿ,
ವಿನೋಬರಸ್ತೆ, ಮೈಸೂರು-570005,
ದಿನಾಂಕ:04-07-2017.

## ಸುತ್ತೋಲೆ

ಶ್ರೀ.ಆರ್.ಸತೀಶ್ ಕುಮಾರ್ ಕೋಲಾರ ರವರು ದಿನಾಂಕ: 2.07.2015 ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ಇವರಿಗೆ ದೂರು ನೀಡಿದ್ದು, ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರುಗಳು ತರಗತಿಗಳಲ್ಲಿ ಪಾಠ ಮಾಡುವಾಗ ಮೊಬೈಲ್ ನಲ್ಲಿ ಮಾತನಾಡುತ್ತಾರೆ, ವ್ಯಾಟ್ಸ ಅಪ್ ಮತ್ತು ಫೇಸ್ ಬುಕ್ ನೋಡಿ ಕಾಲ ಕಳೆಯುತ್ತಾರೆಂದು, ಮಹಿಳಾ ಉಪನ್ಯಾಸಕರು ಚೂಡಿದಾರ್ ಧರಿಸಿ ಕಾಲೇಜಿಗೆ ಬರುತ್ತಾರೆಂದು ದೂರು ನೀಡಿರುತ್ತಾರೆ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕಾದ ಉಪನ್ಯಾಸಕರುಗಳು ಈ ರೀತಿಯಲ್ಲಿ ನಡೆದುಕೊಂಡರೆ ವಿದ್ಯಾರ್ಥಿಗಳಿಗೆ ಯಾವ ರೀತಿ ಮಾರ್ಗದರ್ಶಕರಾಗುತ್ತಾರೆಂದು ದೂರಿನಲ್ಲಿ ಅಪಾದನೆ ಮಾಡಿರುತ್ತಾರೆ.

ಕಾಲೇಜಿನ ಆವರಣದಲ್ಲಿ ಈಗಾಗಲೇ ಮೊಬೈಲ್ ಬಳಸುವುದನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿದೆ. ಆದ್ದರಿಂದ ಎಲ್ಲಾ ಪ್ರಾಂಶುಪಾಲರುಗಳಿಗೆ ಸೂಚಿಸುವುದೇನಂದರೆ ತಮ್ಮ ತಮ್ಮ ಕಾಲೇಜುಗಳಲ್ಲಿ ಉಪನ್ಯಾಸಕರುಗಳು ತರಗತಿಗಳಲ್ಲಿ ಮೊಬೈಲ್ ಬಳಸುವುದನ್ನು ತಡೆಗಟ್ಟುವಂತೆ ಹಾಗೂ ಮಹಿಳಾ ಉಪನ್ಯಾಸಕರುಗಳು ಸೀರೆಯನ್ನು ಧರಿಸಿ ಕಾಲೇಜಿಗೆ ಬರುವಂತೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿ ತೆಗೆದು ಕೊಂಡ ಕ್ರಮದ ಬಗ್ಗೆ ವರದಿಯನ್ನು ಕಳುಹಿಸಿ ಕೊಡುವಂತೆ ತಿಳಿಸಿದೆ.

ಪ್ರಾದೇಶಿಕ ಜಂಟಿ ನಿರ್ದೇಶಕರು
ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ
ಮೈಸೂರು-570 005

ಈ ವಲಯದ ಇಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು/ಶಿಕ್ಷಣ ಮಹಾವಿದ್ಯಾಲಯ/ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

1) ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು.
2) ಕಛೇರಿ ಪ್ರತಿ